ಅನ್ನುತ್ತ ಅವರೆಲ್ಲ ಮೆಟ್ಟಲಿಳಿದು ಹೋಗಿದ್ದರು. ರಾಯರು ಪಕ್ಕದ ಮನೆಯವರಲ್ಲಿ ವಿಚಾರಿಸಿದರು. 'ಈ ವಠಾರದಲ್ಲಿ ಹಿಂದಿನಿಂದಲೂ ಎರಡು ಗೂಂಡಾ ತಂಡಗಳಿವೆ. ಬಾರ್ಕೋಲು ಮಂಜ ಮತ್ತು ಶಂಭು ನೇತಾರರು. ಈ ಏರಿಯಾ ನನ್ನದು ಅಂತ ಕಿತ್ತಾಡುತ್ತಲೇ ಇರುತ್ತಾರೆ. ಎಲೆಕ್ಷನ್ ಟೈಮಲ್ಲಿ ಜಗಳ ತಾರಕಕ್ಕೇರಿ ಸಿಕ್ಕಾಪಟ್ಟೆ ಹೊಡೆದಾಡಿಕೊಳ್ಳುತ್ತಾರೆ. ಇಬ್ಬರೂ ಗಣೇಶ ಹಬ್ಬವನ್ನು ಬಳಸಿಕೊಳ್ಳುವುದು ತಮ್ಮತಮ್ಮ ಶಕ್ತಿಪ್ರದರ್ಶನಕ್ಕೆ. ಮಂಜ ಮೈನ್ ರೋಡಿನ ಮನೆಗಳಲ್ಲೆಲ್ಲ ಚಂದಾ ಎತ್ತಿದರೆ, ಶಂಭು ಬಡಾವಣೆಯ ಒಳಗಿನ ಅಡ್ಡ ರಸ್ತೆಗಳಲ್ಲೆಲ್ಲ ಚಂದಾ ಎತ್ತುತ್ತಾನೆ. ನಿಮ್ಮ ಮನೆಗೆ ಎರಡೂ ರಸ್ತೆಗಳಲ್ಲಿ ಗೇಟಿದೆ ನೋಡಿ, ಹಾಗೆ ಎರಡೂ ತಂಡದವರು ಬಂದಿದ್ದಾರೆ. ನಿಮಗೆ ಮನೆ ಮಾರಿದವರು ಈ ಏರಿಯಾವನ್ನು ಗೂಂಡಾಗಳಿಂದ ಮುಕ್ತ ಮಾಡುತ್ತೇನೆ ಅಂತ ಹೊರಟಿದ್ರು. ಎರಡು ತಂಡಗಳೂ ಅವರ ಮೇಲೆ ಮುಗಿಬಿದ್ದವು. ಪೊಲೀಸರೂ ಸುಮ್ಮನಿದ್ದರು. ಎಲ್ಲರೊಡನೆ ಜಗಳವಾಡಿ ಸೋತು ಹೈರಾಣಾದ ಅವರು ಮನೆಯನ್ನೇ ನಿಮಗೆ ಮಾರಿ ಇಲ್ಲಿಂದ ಹೊರಟು ಹೋದದ್ದು' ಎಂದು ಸತ್ಯ ಬಿಚ್ಚಿಟ್ಟರು. ರಾಯರಿಗೆ ಸ್ಥಿತಿ ಸ್ಪಷ್ಟವಾಯಿತು. ಲೀಲಕ್ಕನಿಗೆ ಈ ವಿಚಾರವನ್ನೆಲ್ಲ ಹೇಳಿದರೆ ಬೀಪಿ ಹೆಚ್ಚಿಸಿಕೊಳ್ಳುತ್ತಾಳೆ ಎನ್ನುವ ಕಾರಣಕ್ಕೆ ಹೇಳಲು ಹೋಗದೆ ತಮ್ಮೊಳಗೇ ಇಟ್ಟುಕೊಂಡರು.

★★★

ಪ್ರಜಾಪ್ರಭುತ್ವದ ನಾಡಿನಲ್ಲಿ ತುಂಡರಸರ ಆಧಿಪತ್ಯ! ಮಂಜ ಮತ್ತು ಶಂಭು ಅವರ ವಿವರಗಳನ್ನು ಕೇಳಿದಾಗ ರಾಯರಿಗೆ ತಾವು ಭೇಟಿಯಾಗಿದ್ದ ಪಶುವೈದ್ಯರ ಮಾತುಗಳು ಜ್ಞಾಪಕಕ್ಕೆ ಬಂದಿದ್ದವು.

ಸ್ವಂತಮನೆಗೆ ಬಂದ ಹೊಸತರಲ್ಲಿ ಲೀಲಕ್ಕನ ಪ್ರೀತಿಯ ನಾಯಿ ಮನೆಯ ಹೊರಗೆ ಒಳಗೆ ಎಲ್ಲೆಂದರಲ್ಲಿ ಉಚ್ಚೆ ಹೊಯ್ಯಲು ಆರಂಭಿಸಿತ್ತು. ಅದಕ್ಕೆ ಆರೋಗ್ಯ ಸರಿಯಿಲ್ಲ ಎಂದು ಭಾವಿಸಿ ಪಶುವೈದ್ಯರಲ್ಲಿ ತೋರಿಸಿದ್ದರು. ವಿವರ ಎಲ್ಲ ಕೇಳಿ ತಿಳಿದ ಅವರು 'ನಾಯಿ ಮಾತ್ರ ಅಲ್ಲ, ಎಲ್ಲ ಪ್ರಾಣಿ ಪಕ್ಷಿಗಳೂ ತಮ್ಮ ಸುತ್ತ ಒಂದು ವಲಯ ಕಟ್ಟಿ ಬೌಂಡರಿ ಹಾಕಿಕೊಳ್ಳುತ್ತವೆ. ಅದರೊಳಗೆ ಇನ್ನೊಂದು ತನ್ನ ಜಾತಿಯ ಅಥವಾ ಇತರ ಜಾತಿಯ ಪ್ರಾಣಿ ಬರುವ ಧೈರ್ಯ ತೋರಬಾರದೆಂದೇ ಸುತ್ತ ಅಲ್ಲಲ್ಲಿ ಮೂತ್ರ ಮಾಡಿ ಬೌಂಡರಿ ಗುರುತು ಹಾಕಿಡುತ್ತವೆ. ಸಲಗ ತನ್ನ ಹಿಂಡಿನ ಹೆಣ್ಣಾನೆಗಳ ಮೇಲಿನ ತನ್ನ ಹಿಡಿತ ಇಟ್ಟುಕೊಳ್ಳಲು ತನ್ನ ಬೌಂಡರಿಯೊಳಗೆ ಬಂದ ಇತರ ಸಲಗಗಳನ್ನು ನಿರ್ದಾಕ್ಷಿಣ್ಯವಾಗಿ ತಿವಿದು ಹೊರಗೋಡಿಸುತ್ತದೆ. ಇದು ಮನುಷ್ಯರಲ್ಲೂ ಇದೆ, ಆದರೆ ಮನುಷ್ಯರು ಮೂತ್ರ ಮಾಡಿ ಬೌಂಡರಿ ಹಾಕಿಕೊಳ್ಳುವುದಿಲ್ಲ. ಸಾಮಾನ್ಯವಾಗಿ ಆಕ್ರಮಣಕ್ಕೆ, ತಿವಿಯುವುದಕ್ಕೆ ಸಹ ಮುಂದಾಗುವುದಿಲ್ಲ, ಆದರೆ ನೀವು ನೋಡಿರಬಹುದು ಎಲ್ಲರೂ ತಮ್ಮತಮ್ಮ ಆಧಿಪತ್ಯದ ವಲಯ ಸ್ಥಾಪಿಸಿಕೊಳ್ಳುತ್ತಾರೆ. ಪರಿಸರದಲ್ಲಿ ಒಳ್ಳೆಯ ಅಡುಗೆಭಟ್ಟರನ್ನು ನೋಡಿ. ವೈದ್ಯರನ್ನು ನೋಡಿ, ವಕೀಲರನ್ನು ನೋಡಿ, ಸಾಹಿತಿ, ಕಲಾವಿದರನ್ನು ನೋಡಿ, ಅವರಿಗೆ ಸ್ವಲ್ಪ ಹೆಸರು ಬಂದಿದೆಯೋ, ಅವರು ತಮ್ಮ ಸ್ಪರ್ಧಿಗಳನ್ನು ಮಾತುಕತೆಯಲ್ಲಿ ಹೇಗಾದರೂ ಎತ್ತಿ ತಂದು ಹಗುರವಾಗಿ ಕೆಳಗಿಳಿಸಿ ಮೆಟ್ಟಿಯೇ ಮಾತು ಮುಗಿಸುವುದು. ಮನುಷ್ಯ ಕೂಡ ಮೂಲದಲ್ಲಿ ಒಂದು ಪ್ರಾಣಿಯೇ. ಪ್ರಾಣಿಗಳಲ್ಲಿರಬಹುದಾದ ಎಲ್ಲ ಗುಣಗಳೂ ಆತನ ಸಹಜ ಲಕ್ಷಣಗಳೇ. ಗುಂಪು ಕಟ್ಟಿಕೊಳ್ಳುವುದು, ನಾಯಕತ್ವಕ್ಕಾಗಿ ಜಗಳ, ತನ್ನಿಚ್ಛೆ ವಿರೋಧಿಸಿದವರೊಡನೆ ಹೋರಾಡಿ ಅವರನ್ನು ಬಗ್ಗಿಸುವುದು ಅಥವಾ ಹೊಡೆದೋಡಿಸುವುದು, ತನ್ನ ಕೋಪವನ್ನು ಬಹಿರಂಗವಾಗಿ ಆರ್ಭಟಿಸಿ ಪ್ರಕಟಿಸುವುದು